

VOKKALIGARA SANGHA (R)
ESTD:- 1906
ವಿಶ್ವೇಶ್ವರಪುರ ಕಲಾ ಮತ್ತು ವಾಣಿಜ್ಯ ಕಾಲೇಜು
VISVESWARAPURA COLLEGE OF ARTS & COMMERCE
VISION
• Liberate, strengthen and enlighten through knowledge.
• Enrich, ennoble and empower by values, integrity and conviction.
MISSION
• Impart the intellectual legacy of the civilization to young minds.
• Strengthen young minds by building character and convictions.
• Provide academic, moral, spiritual guidance to students to develop into men and women of the future.
VISVESWARAPURA COLLEGE OF ARTS & COMMERCE
STOP
RAGGING CONSTITUTES
PUNISHMENTS
WARNING
Ragging is a crime
ಜ್ಞಾನ ದೇಗುಲವಿದು



ಬರಾಜು ಕಂಪನಿ ನಿಯಮಿತ
ರ್ಣ ಸ್ವಾಮ್ಯಕ್ಕೆ ಒಳಪಟ್ಟದ್ದ)
A2002SGC030438)
ಪ್ರೊಕ್ಯೂರ್‌ಮೆಂಟ್ ಮೂಲಕ)
: 21.03.2022 ರ ಅನ್ವಯ ಬೆಂಗಳೂರು,
ಪೂರ್ವ ಹಾಗೂ ಉತ್ತರ ವೃತ್ತದ ವಿವಿಧ
01.04.2022 (14:00 ಗಂಟೆಯವರೆಗೆ),
ರ 16.00 ಗಂಟೆಯವರೆಗೆ. ಬಿಡ್
22 (11.00 ಗಂಟೆಗೆ) ರಂದು ಅಥವಾ
ವೆಬ್‌ಸೈಟ್ https://eproc.
ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ
ಇ–ಮೇಲ್ hphelpdesk.blr@
ಪಡೆಯಬಹುದು. helpdesk.bln@i
ರ್ (ವಿದ್ಯುತ್), (ಪಾ, ಕಾ ಮತ್ತು ಪಾ),
ವಲಯ (ಉತ್ತರ), ಬೆವಿಕಂ, ಬೆಂಗಳೂರು.
ಗೆ ಕರೆ ಮಾಡಿ : 1912
ಡೌನ್‌ಲೋಡ್ ಮಾಡಿಕೊಳ್ಳಿ

ಸರಕಾರ
ೋಗಿ ಇಲಾಖೆ)
ರರು, ಲೋಕೋಪಯೋಗಿ
, ಚಿಕ್ಕೋಡಿ
ಮೇಲ್:eepwdckd@gmail.com
1-22/7665 ದಿನಾಂಕ:19/03/2022
ಇ-ಟೆಂಡರ್ ಪ್ರಕಟಣೆ-2
ಡರ್ ಪ್ರಕಟಣೆ ಕ್ರ.ಸಂ.ಲೋ.ಇ./
149 ದಿ: 07/03/2022 ರಡಿ
ಈ ಕಚೇರಿ ಅಲ್ಪಾವಧಿ ಟೆಂಡರ್
2022 ರಡಿ ಮೊದಲನೇ ಬಾರಿ
ದಂ ಪ್ರಕಟಣೆಯಲ್ಲಿನ ಕ್ರ.ಸಂ. 2
ಬಾರಿ ಮತ್ತೆ ಅವಧಿ ವಿಸ್ತರಣೆ
ಸಿದ ನಿಗದಿತ ದಿನಾಂಕಗಳು ಈ
ಗ ಕಚೇರಿಯಲ್ಲಿ:23-03-2022
– ಸಂದೇಹ ಮತ್ತು ವಿವರಣೆಗಳಿಗೆ
(ಸಾಯಂಕಾಲ 5.30 ಗಂಟೆಯ
ವ ಕೊನೆಯ ದಿನಾಂಕ:28-03-
ಯವರೆಗೆ), 4)ತಾಂತ್ರಿಕ ಬಿಡ್‌ನ್ನು
tem):30-03-2022 (ಸಾಯಂ

# ನವೀನ್ ಮೃತದೇಹಕ್ಕೆ ಅಂತಿಮ ನಮನ

## ಮುಖ್ಯಮಂತ್ರಿ ಬೊಮ್ಮಾಯಿ ಸೇರಿ ಗಣ್ಯರಿಂದ ಅಂತಿಮ ಗೌರವ

ಹಾವೇರಿ, ಮಾ. 21: ಉಕ್ರೇನ್‌ನಲ್ಲಿ ಮೃತಪಟ್ಟ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಚಳಗೇರಿ ಗ್ರಾಮದ ನವೀನ್ ಗ್ಯಾನಗೌಡರ್ ಅವರ ಪಾರ್ಥಿವ ಶರೀರ 21 ದಿನಗಳ ಬಳಿಕ ಸೋಮವಾರ ತವರಿಗೆ ಆಗಮಿಸಿತು.

ನವೀನ್ ಮೃತಪಟ್ಟ ದಿನದಿಂದಲೇ ಪಾರ್ಥಿವ ಶರೀರ ತರುವಂತೆ ಗ್ರಾಮಸ್ಥರು, ಕುಟುಂಬಸ್ಥರು ಸರಕಾರವನ್ನು ಒತ್ತಾಯಿಸಿದ್ದರು. ಪ್ರಧಾನಿ ಮೋದಿ ಅವರು ನವೀನ್ ಕುಟುಂಬದವರಿಗೆ ಕರೆ ಮಾಡಿ ಸಾಂತ್ವನ ಹೇಳಿದ್ದರು. ಸಿಎಂ ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ, ವಿಪಕ್ಷ ನಾಯಕ ಸಿದ್ದರಾಮಯ್ಯ ಸಹಿತ ಪ್ರಮುಖ ನಾಯಕರು ಚಳಗೇರಿಗೆ ಆಗಮಿಸಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಪಾರ್ಥಿವ ಶರೀರ ತರುವ ಭರವಸೆ ನೀಡಿದ್ದರು.

### ಸಿಎಂ ಅಂತಿಮ ದರ್ಶನ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಳಗೇರಿ ಗ್ರಾಮಕ್ಕೂ ಆಗಮಿಸಿ ಅಂತಿಮ ದರ್ಶನ ಪಡೆದರು. ಸಿರಿಗೆರೆಯ ತರಳಬಾಳು ಡಾ| ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಹರಿಹರದ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಮುಂತಾದವರಿದ್ದರು.

ಈ ವೇಳೆ ಮಾತನಾಡಿದ ನವೀನ್ ತಂದೆ ಶೇಖರಗೌಡ ಅವರು, ಸಾಕಷ್ಟು ಪ್ರಯತ್ನಪಟ್ಟು ಮಗನ ಶವವನ್ನು ತರಿಸಿದ್ದೀರಿ. ಕೊನೆಯ ಬಾರಿ ಮಗನ ಮುಖ ನೋಡಲು ಅವಕಾಶ ಮಾಡಿಕೊಟ್ಟದ್ದಕ್ಕೆ ನಿಮಗೆಲ್ಲ ಕೃತಜ್ಞತೆ ಸಲ್ಲಿಸುತ್ತೇವೆ ಎಂದು ಹೇಳಿ ಕಣ್ಣೀರಿಟ್ಟರು.



ಹಾವೇರಿ: ಸಿಎಂ ಬೊಮ್ಮಾಯಿ ನವೀನ್ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ವಿವಿಧ ಮಠಾಧೀಶರು ಈ ವೇಳೆ ಉಪಸ್ಥಿತರಿದ್ದರು.

ಅದಕ್ಕೆ ಪ್ರತಿಕ್ರಿಯಿಸಿದ ಸಿಎಂ, ನಾವು ಎಷ್ಟೇ ಪ್ರಯತ್ನ ಮಾಡಿದರೂ ನಿಮ್ಮ ಪ್ರಾಮಾಣಿಕತೆ, ಪುಣ್ಯದ ಫಲ, ದೈವ ಸಂಕಲ್ಪದಿಂದ ಯುದ್ಧಪೀಡಿತ ಉಕ್ರೇನ್‌ನಿಂದ ಪಾರ್ಥಿವ ಶರೀರ ತರಲು ಸಾಧ್ಯವಾಗಿದೆ. ನವೀನ್‌ನನ್ನು ಜೀವಂತವಾಗಿ ಕರೆತರಲು ಸಾಧ್ಯವಾಗಲಿಲ್ಲ, ಆದರೆ ಸತತ ಪ್ರಯತ್ನದಿಂದ ಪಾರ್ಥಿವ ಶರೀರ ತರಲಾಗಿದೆ. ಯಾವುದೇ ಸಂದರ್ಭದಲ್ಲೂ ಎದೆಗುಂದದೆ ಧೈರ್ಯವಾಗಿರಿ, ಏನಾದರೂ ಸಮಸ್ಯೆ ಆದರೆ ನಮ್ಮ ಗಮನಕ್ಕೆ ತನ್ನಿ ಎಂದು ಸಾಂತ್ವನ ಹೇಳಿದರು.

## ವಿದ್ಯಾರ್ಥಿಗಳೊ
## ಸಿಎಂ ಸಮಾಲೋ

ಸಿಎಂ ಬಸವರಾಜ ಬ
ಚಳಗೇರಿಗೆ ಆಗಮಿಸಿದ್ದ
ವಿದ್ಯಾರ್ಥಿಗಳನ್ನು ತಮ್ಮ
ಕರೆಸಿಕೊಂಡು ಸಮಾಲೋ
ನಡೆಸಿದರು. ಅಂದು ನ
ಕೂಡ ನಿಮ್ಮೊಂದಿಗೆ ಇದ್ದ
ಇಂದು ಜೀವಂತವಾಗಿ
ಬರುತ್ತಿದ್ದ, ಆದರೆ ವಿಧಿ
ಆಟ ಆಡಿದೆ ಎಂದು ಹ
ಭಾವುಕರಾದರು. ನಿಮ್ಮ
ಮುಂದುವರಿಕೆಗೆ ವ್ಯವ
ಮಾಡುವುದಾಗಿ ಭರವ
ನೀಡಿದರು. ಉಕ್ರೇನ್
ಯುದ್ಧಪೀಡಿತ ಪ್ರದೇಶ
ಮೃತದೇಹವನ್ನು ತರಲ
ಕಷ್ಟ ಎದುರಾಯಿತು ಎ
ಬಗ್ಗೆ ಬೊಮ್ಮಾಯಿ ಹಾ
ತರಳಬಾಳು ಡಾ| ಶಿವ
ಶಿವಾಚಾರ್ಯ ಸ್ವಾಮೀ
ಹರಿಹರದ ಪಂಚಮಸಾ
ಪೀಠದ ವಚನಾನಂದ
ಚರ್ಚಿಸಿದರು.

---

### ಬೆಂಗಳೂರು ನಗರ ವಿ.ವಿ.:
## ಪೋಸ್ಟ್‌ಮ್ಯಾನ್‌ಗೆ 2ನೇ ರ್‍ಯಾಂಕ್

ಬೆಂಗಳೂರು, ಮಾ. 21: ಸುಂಕದಕಟ್ಟೆ ಅಂಚೆ ಕಚೇರಿಯಲ್ಲಿ ಪೋಸ್ಟ್‌ಮ್ಯಾನ್ ಕೆಲಸ ಮಾಡಿಕೊಂಡು ವಿವಿ ಪುರಂ ಕಲಾ ಮತ್ತು ವಾಣಿಜ್ಯ ಸಂಜೆ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಸಂಜಯ್ ಕೆ.ಪಿ. ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಮೊದಲ ಘಟಿಕೋತ್ಸವದಲ್ಲಿ 2ನೇ ರ್‍ಯಾಂಕ್ ಗಿಟ್ಟಿಸಿಕೊಂಡಿದ್ದಾರೆ.

# ಶೀಘ್ರ ಸೈಬರ್ ಭದ್ರತಾ ನೀತಿ ಜಾ

ಬೆಂಗಳೂರು, ಮಾ. 21: ಸೈಬರ್ ವಂಚನೆಯ ಪ್ರಕರಣಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸರಕಾರವು ಶೀಘ್ರದಲ್ಲೇ ಸೈಬರ್ ಭದ್ರತಾ ನೀತಿಯನ್ನು ಜಾರಿಗೊಳಿಸಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ| ಸಿ.ಎನ್.ಅಶ್ವತ್ಥ ನಾರಾಯಣ ತಿಳಿಸಿದ್ದಾರೆ.

ಅಸೋಚೆಂ ಸಂಘಟನೆಯು ಸೋಮವಾರ ವರ್ಚುವಲ್‌ನಲ್ಲಿ ಆಯೋಜಿಸಿದ್ದ ಎರಡು ದಿನಗಳ ಅವಧಿಯ 12ನೇ ಜಾಗತಿಕ

**ಡಾ| ಅಶ್ವತ್ಥನಾರಾಯಣ**

ಸಮಾವೇಶದಲ್ಲಿ ಮಾತನಾಡಿದ ಅವರು, ಉದ್ದೇಶಿತ ಸೈಬರ್ ಭದ್ರತಾ ನೀತಿಯು ಎಲ್ಲ ಆಯಾಮಗಳನ್ನೂ ಪರಿಗಣನೆಗೆ ತೆಗೆದುಕೊಂಡಿದ್ದು, ಈ ನೀತಿ ಜಾರಿಯಾದರೆ ಸರಕಾರದ ಮಾಹಿತಿ ತಂತ್ರಜ್ಞಾನ ಆಧಾರಿತ ಸಂಪನ್ಮೂಲಗಳಾದ ರಾಜ್ಯ ದತ್ತಾಂಶ ಕೇಂದ್ರ, ವೈಡ್ ಏರಿಯಾ ನೆಟ್‌ವರ್ಕ್ ಮತ್ತು ಇ-ಆಡಳಿತ ಸೌಲಭ್ಯಗಳು ಸುರಕ್ಷಿತವಾಗಿರಲಿವೆ ಎಂದರು.

ಭಾರತೀಯ ರಿಸ
ಇತ್ತೀಚಿನ ವರದಿಯ
22ರಲ್ಲಿ ದೇಶದ ವಾ
ಗಳಲ್ಲಿ 1.38 ಟ್ರಿಲಿ
ಗಳಷ್ಟು ಅಗಾಧ ಮೊ
ವಂಚನೆಗೆ ಒಳಗಾಗಿದೆ
ಖಾಸಗಿ ಬ್ಯಾಂಕುಗಳಲ್ಲಿ
ಮತ್ತು ಇಂಟರ್ನೆಟ್
ವಂಚನೆಗಳು
ನಡೆಯುತ್ತಿವೆ.
ನಿಗ್ರಹಿಸಬೇಕಾಗಿದೆ
ವಿವರಿಸಿದರು.

ಪ್ರಜಾವಾಣಿ ಶನಿವಾರ • ಮಾರ್ಚ್ 26, 2022

### ಪೋಸ್ಟ್‌ಮ್ಯಾನ್‌ಗೆ 2ನೇ ರ್‍ಯಾಂಕ್; ಸೆಕ್ಯೂರಿಟಿ ಗಾರ್ಡ್‌ಗೆ 3ನೇ ರ್‍ಯಾಂಕ್

# ಬಡತನದಲ್ಲೂ ಗ್ರಾಮೀಣ ಪ್ರತಿಭೆಗಳ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಪ್ರದೇಶದ ಬಡ ಕುಟುಂಬದ ಈ ಪ್ರತಿಭೆಗಳು ದುಡಿಮೆ ಜತೆ ಪದವಿ ಪಡೆದು ರ್‍ಯಾಂಕ್ ಗಳಿಸಿದವರು. ಓದುವ ಛಲ ಮತ್ತು ಸಾಧಿಸುವ ತುಡಿತದಿಂದ ಜೀವನದಲ್ಲಿ ಯಶಸ್ಸಿನ ಮಾರ್ಗವನ್ನು ಕಂಡುಕೊಂಡಿದ್ದಾರೆ.

ಬೆಂಗಳೂರು ನಗರ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿಯಲ್ಲಿ ಎರಡನೇ ರ್‍ಯಾಂಕ್ ಪಡೆದಿರುವ ಕೆ.ಪಿ. ಸಂಜಯ್ ಮತ್ತು ಮೂರನೇ ರ್‍ಯಾಂಕ್ ಪಡೆದಿರುವ ಕೆ. ರಾಮಚಂದ್ರಪ್ಪ ಅವರು ತಮಗೆ ಎದುರಾದ ಸವಾಲುಗಳು, ಸಂಕಷ್ಟಗಳ ನಡುವೆಯೂ ಓದುವುದನ್ನು ಮುಂದುವರಿಸಿದವರು. ಏ.11ರಂದು ನಡೆಯಲಿರುವ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವದಲ್ಲಿ ಇವರು ಚಿನ್ನದ ಪದಕಗಳನ್ನು ಪಡೆಯಲಿದ್ದಾರೆ.

ನಗರದ ಸುಂಕದಕಟ್ಟೆ ಪ್ರದೇಶದ ವಿಶ್ವನೀಡಂ ಅಂಚೆ ಶಾಖೆಯಲ್ಲಿ ಪೋಸ್ಟ್‌ಮ್ಯಾನ್ ಆಗಿ ಕೆಲಸ ಮಾಡುತ್ತಿರುವ 25 ವರ್ಷದ ಕೆ.ಪಿ. ಸಂಜಯ್, ವಿ.ವಿ. ಪುರಂ ಕಲಾ ಮತ್ತು ವಾಣಿಜ್ಯ ಸಂಜೆ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದಿದ್ದಾರೆ. ಶೇ 91.75ರಷ್ಟು ಅಂಕಗಳಿಸಿ ವಿಶ್ವವಿದ್ಯಾಲಯಕ್ಕೆ ಎರಡನೇ


ಕೆ.ಪಿ. ಸಂಜಯ್


ಕೆ. ರಾಮಚಂದ್ರಪ್ಪ

ರ್‍ಯಾಂಕ್ ಗಳಿಸಿದ್ದಾರೆ. ಇದೇ ಕಾಲೇಜಿನಲ್ಲಿ ಪಿಯುಸಿ ಮುಗಿಸಿದ್ದ ಸಂಜಯ್, ಶೇ 87ರಷ್ಟು ಅಂಕ ಪಡೆದಿದ್ದರು.

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕಾರಕ್ಕಹಳ್ಳಿ ಗ್ರಾಮದ ಸಂಜಯ್, ಪೋಸ್ಟ್‌ಮ್ಯಾನ್ ಕೆಲಸ ಮಾಡುತ್ತ ಓದಿನ ಜತೆಗೆ, ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ತಂಗಿ ಬಿ.ಇ. (ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕಲ್ ಎಂಜಿನಿಯರಿಂಗ್) ಓದಲು ಸಹ ಸಂಪೂರ್ಣ ನೆರವಾಗಿದ್ದಾರೆ. ಸಂಜಯ್ ಮತ್ತೆ ತಮ್ಮ ಓದು ಮುಂದುವರಿಸಿ ಅಧಿಕಾರಿಯಾಗುವ ಗುರಿ ಹೊಂದಿದ್ದಾರೆ.

'ತಂದೆ ಅನಕ್ಷರಸ್ಥ, ತಾಯಿ ಎಸ್ಸೆಸ್ಸೆಲ್ಸಿ ಮುಗಿಸಿದ್ದಾರೆ. ನಮಗಿರುವುದು 30 ಗುಂಟೆ ಜಾಗ. ಮನೆಯಲ್ಲಿ ಬಡತನದಿಂದಾಗಿ ಓದುವುದು ಕಷ್ಟವಾಗಿತ್ತು. ಹೀಗಾಗಿ, ಬೇಗ ಕೆಲಸಕ್ಕೆ ಸೇರಿದೆ. ಐಟಿಐ ಮಾಡಿ, ಪಿಯುಸಿ ಓದಿದೆ. ಪೋಸ್ಟ್‌ಮ್ಯಾನ್ ಕೆಲಸ ಜತೆ ಸಂಜೆ ಕಾಲೇಜಿಗೆ ಹೋಗಿ ಪದವಿ ಮುಗಿಸಿದ್ದೇನೆ. ರ್‍ಯಾಂಕ್ ಪಡೆಯಬೇಕು ಎನ್ನುವುದು ನನ್ನ ಛಲವಾಗಿತ್ತು. ಕೆಪಿಎಸ್‌ಸಿ ಪರೀಕ್ಷೆ ಬರೆದು ಸರ್ಕಾರದಲ್ಲಿ ಅಧಿಕಾರಿಯಾಗುವ ಬಯಕೆ ನನ್ನದು. ಅಂಚೆ ಶಿಕ್ಷಣ ಮೂಲಕ ಓದು ಮುಂದುವರಿಸುತ್ತೇನೆ. ಜತೆ, ಜತೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕೋಚಿಂಗ್ ಪಡೆಯಲು ಉದ್ದೇಶಿಸಿದ್ದೇನೆ' ಎಂದು ಸಂಜಯ್ ಹೇಳುತ್ತಾರೆ.

'ಕಾಲೇಜು ಪ್ರಾಂಶುಪಾಲರಾದ ಶ್ರೀಧರ್, ಅಧ್ಯಾಪಕರಾದ ಜಯರಾಮ್ ಹಾಗೂ ಅಂಚೆ ಇಲಾಖೆಯ ಅಧಿಕಾರಿಗಳು ಮತ್ತು ನೌಕರರು ಪ್ರೋತ್ಸಾಹ, ಮಾರ್ಗದರ್ಶನ ನೀಡಿದ್ದಾರೆ. ರ್‍ಯಾಂಕ್ ಪಡೆದಿದ್ದಕ್ಕೆ ಅಂಚೆ ಇಲಾಖೆ ಗೌರವಿಸಿದ್ದು ಹೆಮ್ಮೆಯ ಕ್ಷಣ' ಎಂದು ನೆನಪಿಸಿಕೊಳ್ಳುತ್ತಾರೆ.

> **ಸಂಜಯ್ ಪಿಯುಸಿನಲ್ಲಿ 9ನೇ ರ್‍ಯಾಂಕ್ ಬಂದಿದ್ದ. ಅಧ್ಯಾಪಕರು ಮತ್ತು ಕಾಲೇಜು ವತಿಯಿಂದ ಮಾರ್ಗದರ್ಶನ, ನೆರವು ನೀಡಿದ್ದೇವೆ. ನಮಗೂ, ಕಾಲೇಜಿಗೂ ಹೆಮ್ಮೆಯಾಗಿದೆ**
>
> **ಡಾ. ಶ್ರೀಧರ್,** ವಿ.ವಿ. ಪುರಂ ಕಲಾ ಮತ್ತು ವಾಣಿಜ್ಯ ಸಂಜೆ ಕಾಲೇಜಿನ ಪ್ರಾಂಶುಪಾಲ

> **ರಾಮಚಂದ್ರ ಐಎಎಸ್ ಮಾಡುವ ಗುರಿ ಹೊಂದಿದ್ದಾನೆ. ಕಾಲೇಜಿನ ಇತಿಹಾಸದಲ್ಲೇ ಮೊದಲ ಬಾರಿ ರ್‍ಯಾಂಕ್ ದೊರೆತಿದೆ. ನಮ್ಮೆಲ್ಲರಿಗೂ ಹೆಮ್ಮೆಯಾಗಿದೆ**
>
> **ಡಾ.ಸಿ.ಎಂ. ಈಶ್ವರರೆಡ್ಡಿ,** ವಿ.ವಿ. ಪುರಂ ಕಲಾ ಮತ್ತು ವಾಣಿಜ್ಯ ಕಾಲೇಜಿನ ಪ್ರಾಂಶುಪಾಲ

**ಶಿಕ್ಷಕನಾಗುವ ಬಯಕೆ:** ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಅಜ್ಜಯ್ಯನಹಟ್ಟಿಯ ಗ್ರಾಮದ ಕೆ. ರಾಮಚಂದ್ರಪ್ಪ ಅವರ ಪರಿಸ್ಥಿತಿಯೂ ಭಿನ್ನವಾಗಿಲ್ಲ. ಬಡ ಕುಟುಂಬದಲ್ಲಿ ಬೆಳೆದ ರಾಮಚಂದ್ರಪ್ಪ ಅವರಿಗೆ ಶಿಕ್ಷಣ ಪಡೆಯುವುದಕ್ಕಿಂತಲೂ ದುಡಿಯುವುದು ಅನಿವಾರ್ಯವಾಗಿತ್ತು.

ನಗರದ ವಿ.ವಿ. ಪುರ ಕಲಾ ಮತ್ತು ವಾಣಿಜ್ಯ ಪದವಿ (ಹಗಲು) ಕಾಲೇಜಿನಲ್ಲಿ ಅಧ್ಯಯನ ಮಾಡಿರುವ ರಾಮಚಂದ್ರಪ್ಪ ಅವರು, ಬಿ.ಎ. ಪದವಿಯಲ್ಲಿ ಶೇ 89.83ರಷ್ಟು ಅಂಕ ಗಳಿಸಿ ಮೂರನೇ ರ್‍ಯಾಂಕ್ ಪಡೆದಿದ್ದಾರೆ. ರಾತ್ರಿ ಹೊತ್ತಿನಲ್ಲಿ ಸೆಕ್ಯೂರಿಟಿ ಗಾರ್ಡ್ ಮತ್ತು ಸಮಾರಂಭಗಳಲ್ಲೂ ಊಟ ಬಡಿಸುವ ಕೆಲಸಗಳನ್ನು ಮಾಡುತ್ತಾ ಅಧ್ಯಯನ ಕೈಗೊಂಡಿದ್ದರು.

'ನನ್ನ ತಂದೆ-ತಾಯಿ ಅನಕ್ಷರಸ್ಥರು. ನಮ್ಮ ಕುಟುಂಬದ ಆರ್ಥಿಕ ಪರಿಸ್ಥಿತಿ ಕಷ್ಟದಾಯಕವಾಗಿತ್ತು, ಜಮೀನು ಸಹ ಇಲ್ಲ. ಎಸ್ಸೆಸ್ಸೆಲ್ಸಿ ಮುಗಿದ ತಕ್ಷಣ ಓದು ನಿಲ್ಲಿಸಿ ದುಡಿಯೋಕೆ ಹೇಳಿದ್ದರು. ನಮ್ಮ ಚಿಕ್ಕಪ್ಪ ಬೆಂಗಳೂರಿಗೆ ಕರೆದುಕೊಂಡು ಬಂದು ಕಾಲೇಜಿಗೆ ಸೇರಿಸಿದರು. ಜೀವನದಲ್ಲಿ ಏನಾದರೂ ಸಾಧಿಸಬೇಕು ಎನ್ನುವ ಗುರಿಯೊಂದಿಗೆ ರಾತ್ರಿ ಸೆಕ್ಯೂರಿಟಿ ಗಾರ್ಡ್ ಕೆಲಸ ಮಾಡುತ್ತ ಓದು ಮುಂದುವರಿಸಿದೆ. ಕೆಲ ಬಾರಿ ಸಮಾರಂಭಗಳಲ್ಲಿ ಊಟ ಬಡಿಸುವ ಕೆಲಸಕ್ಕೆ ಹೋಗುತ್ತೇನೆ. ಪಿಯುಸಿಯಲ್ಲೂ ಶೇ 93ರಷ್ಟು ಅಂಕ ಪಡೆದಿದ್ದೆ' ಎಂದು ರಾಮಚಂದ್ರಪ್ಪ ತಾವು ಬೆಳೆದ ಬಂದ ಪರಿಸ್ಥಿತಿಯನ್ನು ವಿವರಿಸುತ್ತಾರೆ.

'ಈಗ ಬಿ.ಇಡಿ. ಪಡೆಯಲು ವಿಜಯ ಶಿಕ್ಷಕರ ಮಹಾವಿದ್ಯಾಲಯಕ್ಕೆ ಸೇರಿದ್ದೇನೆ. ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆಯನ್ನು ಸಹ ಕೈಗೊಂಡಿದ್ದೇನೆ. ಸರ್ಕಾರಿ ಅಧಿಕಾರಿ ಅಥವಾ ಶಿಕ್ಷಕನಾಗಬೇಕು ಎನ್ನುವ ಗುರಿ ಹೊಂದಿದ್ದೇನೆ. ನನ್ನ ಓದಿಗೆ ಹಿಂದುಳಿದ ವರ್ಗಗಳ ಇಲಾಖೆಯ ವಸತಿ ನಿಲಯ ವಾರ್ಡನ್ ನರಸಿಂಹರಾಜು, ಕಾಲೇಜು ಪ್ರಾಂಶುಪಾಲರಾದ ಈಶ್ವರರೆಡ್ಡಿ ಮತ್ತು ಅಧ್ಯಾಪಕರು ಸ್ಫೂರ್ತಿ ನೀಡಿ, ಮಾರ್ಗದರ್ಶನ ನೀಡಿದ್ದಾರೆ' ಎಂದು ಸ್ಮರಿಸಿಕೊಳ್ಳುತ್ತಾರೆ.